ಎಲ್ಲೆಲ್ಲೂ ಜೀವನದಿ ಹರಿಯುತಿದೆ ಬದುಕಿನಲಿ

ಕಾವೇರಿ ಚಿಮ್ಮಿಹಳು ಕೊಡಗಿನಲಿ ತಾನಾಗಿ
ಪಂಚಗಂಗಾವಳಿಯ ಚೆಲುವಿನಲಿ ಅನೂಹ್ಯ

ಬಾನಿನಲಿ ಮೇಲೆದ್ದ ರವಿಕಿರಣ ಬಿಸಿಲಾಗೆ
ಭುವಿ ಜಲ ನಭ ಕೇರಿ ಹನಿಯಾಗಿ ಮಳೆಯಾಯ್ತು

ನಿತ್ಯ ಹರಿದ್ವರ್ಣದಲಿ ಕಂಗೊಳಿಪ ಸಹ್ಯಾದ್ರಿ
ಪಡುವಣದ ಮೈಸಿರಿಯ ಹೊನ್ನ ತೆರೆಯಲಿ ನಾನು

ಕನ್ನಡದ ನಾಡಿನಲಿ ಹಚ್ಚ ಹಸುರಿನ ಚೆಲುವು
ಉಕ್ಕಿ ಹರಿಯುತ್ತಿರುವ ಮಾತೆ ನೇತ್ರಾವತಿ

ಕೊಡಚಾದ್ರಿಯಲಿ ನಿಂದು ಹಣಿಕಿದೆನು ಪೂರ್ವಕ್ಕೆ
ರವಿಯುದಿಸಿದನಾಗ ಅರುಣಕಿರಣದ ಕಾಂತಿ

ನೋಡಿಲ್ಲಿ ಮಳೆಬಂದು ಮಿನುಗುತಿದೆ ಮುತ್ತಾಗಿ
ಹಸಿರು ಹೊದಿಕೆಯಿಂದ ಪಸರಿಸಿದೆ ಮೈಸಿರಿಯಾ

**ಕೋಟೇಶ್ವರ ಸೂರ್ಯನಾರಾಯಣ ರಾವ್**

# ನಾಗಮಂಡಲ

**ಆಗಸ್ಟ್ 15, ನಾಗರಪಂಚಮಿ ಈ ಸಂದರ್ಭದಲ್ಲಿ ಇದೊಂದು ಸಕಾಲಿಕ ವಿವರಣಾತ್ಮಕ ಲೇಖನ – ಸಂ.**

ನಾಗಾರಾಧನೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಾನವ ಮನೆಕಟ್ಟಿ ಬದುಕು ಆರಂಭಿಸಿದ ಕಾಲದಿಂದ ನಾಗಾರಾಧನೆ ಅಸ್ತಿತ್ವದಲ್ಲಿದೆ. "ನಾಗರ ಖಂಡ"ವೆಂದು ಗುರುತಿಸಿರುವ ಪರಶುರಾಮ ಸೃಷ್ಟಿಯಲ್ಲಿ ನಾಗಾರಾಧನೆಗೆ ಹೆಚ್ಚು ಮಹತ್ವವಿದೆ. ನಾಗ ಪ್ರತ್ಯಕ್ಷ ದೇವತಾ ಎನ್ನುವುದುಂಟು. ಸಂತಾನ, ಸಂಪತ್ತು, ಕೃಷಿ, ಸಮೃದ್ಧಿ ಅನುಗ್ರಹಿಸುವ ದೈವವಾಗಿ, ಚರ್ಮರೋಗ ನಿವಾರಿಸುವ ದೇವರಾಗಿ ಪೂಜೆಗೊಳ್ಳುವ 'ನಾಗ'ದೇವತೆಗೂ ವೃಕ್ಷಕ್ಕೂ ಅವಿನಾಭಾವ ಸಂಬಂಧ. ಆದ ಕಾರಣ ಮರದ ಬುಡದಲ್ಲಿ, ತಂಪಾದ ಪರಿಸರದಲ್ಲಿ ಸ್ಥಾನ ಪಡೆಯುತ್ತ, ಕಲ್ಲಿನ–ಶಿಲಾ ಖಂಡ ರೂಪಗಳಲ್ಲಿ ಪ್ರತೀಕಗಳಾಗಿ ನೆಲೆಗೊಂಡು ಆಸ್ತಿಕರಿಂದ ನಾಗರಕಟ್ಟೆಗಳಲ್ಲಿ ನಾಗಬನಗಳಲ್ಲಿ ನಾಗದೇವತೆ ಆರಾಧನೆ ಪಡೆಯುತ್ತಿದ್ದಾನೆ. ಭೂಮಿ–ಆಕಾಶಗಳೂ ನಾಗದೇವತಾ ಸನ್ನಿಧಾನಗಳನ್ನು ಹೊಂದಿದೆ. ಸೂರ್ಯ ರಶ್ಮಿಗಳಲ್ಲೂ, ಜಲಗಳಲ್ಲೂ ನಾಗ ದೇವತಾ ಶಕ್ತಿಗಳು ಅಡಗಿದೆ.

ನಾಗ ಶಾಪ ಬಲು ದೊಡ್ಡ ದುರಂತವೆಂದು ಭಾವಿಸಿ, ವಿವಿಧ ರೀತಿಯ ಪ್ರಾಯಶ್ಚಿತ ವಿಧಿಗಳನ್ನು, ವಿಶೇಷ ಆರಾಧನಾ ವಿಧಗಳನ್ನು ತಲೆ ತಲಾಂತರಗಳಿಂದ ಅನುಸರಿಸಲಾಗುತ್ತದೆ. ತನು, ತಂಬಿಲ, ನಾಗರಪಂಚಮಿ, ನಾಗಪ್ರತಿಷ್ಠೆ, ಸರ್ಪಸಂಸ್ಕಾರ, ಆಶ್ಲೇಷ ಬಲಿ, ಢಕ್ಕೆ ಬಲಿ, ಇತ್ಯಾದಿ ನಾಗಾರಾಧನೆ ಪ್ರಮುಖ ವಿಧಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಮಹತ್ವಪೂರ್ಣ ಆರಾಧನೆಯಾಗಿ ಬೆಳೆದು ಬಂದಿದೆ ನಾಗಮಂಡಲ.

ನಾಗಮಂಡಲ ವೈದಿಕ ಪರಂಪರೆಯಲ್ಲಿ ನಾಗನಿಗೆ ನಡೆಸುವ ನೃತ್ಯಸೇವೆ. ಇಲ್ಲಿ ಬ್ರಾಹ್ಮಣ ಅರ್ಚಕರು–ವೈದ್ಯರು ಪ್ರಧಾನಪಾತ್ರ ವಹಿಸುತ್ತಾರೆ. ಮಂಡಲ ಮಾಧ್ಯಮದಲ್ಲಿ ನಾಗನನ್ನು ಪೂಜಿಸುವುದು ನಾಗಮಂಡಲದ ಮುಖ್ಯ ಉದ್ದೇಶ. ನಾಗಮಂಡಲದ ದಿನ ಸರ್ವಪ್ರಾಯಶ್ಚಿತ್ತವಾಗಿ ಗಣಹೋಮ, ಚಂಡಿಕಾಹೋಮ, ಬ್ರಾಹ್ಮಣ ವಟು ಆರಾಧನೆ, ಕನ್ನಿಕಾ ಪೂಜೆ, ಬ್ರಾಹ್ಮಣ ಸುವಾಸಿನಿ ಆರಾಧನೆ ಮತ್ತು ದಾನ ಸಂಸ್ಕಾರಗಳು ನಡೆಯುತ್ತವೆ. ನೆರೆದ ಭಕ್ತಾಧಿಗಳಿಗೆ ಪ್ರಸಾದ ವಿತರಣೆಯಾಗುತ್ತದೆ. ಇಲ್ಲಿ ಜಾತಿ ಮತ ಭೇದವಿಲ್ಲ ಎಲ್ಲಿಯೂ ಕೊರತೆ ಕಾಣದಂತೆ ಅನ್ನಸಂತರ್ಪಣೆ ನಡೆಯುತ್ತದೆ. ಇಂದು ಅನ್ನಸಂತರ್ಪಣೆ 5 ರಿಂದ 50 ಸಾವಿರದವರೆಗೂ ಭಕ್ತಾದಿಗಳು ಪ್ರಸಾದ ಸ್ವೀಕರಿಸುವುದನ್ನು ನೋಡಿದರೆ ನಾಗನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಸಾಲದು.

ಸಂಜೆ ನಾಗಮಂಡಲವನ್ನು ಬಯಲಿನ ಮಧ್ಯೆ ವಿಶಾಲವಾದ ಗದ್ದೆಗಳಲ್ಲಿ ಸರ್ವಾಲಂಕಾರಗೊಂಡ ರಂಗಮಂಟಪದಲ್ಲಿ ನಡೆಸಲಾಗುತ್ತದೆ. ನಾಗಮಂಡಲದ ವಿಧಿಗಳಲ್ಲಿ ನಾಲ್ಕು ವಿಧ. ನಾಲ್ಕು ಪವಿತ್ರಗಳ ಕಾಲು ಮಂಡಲ, ಎಂಟು ಪವಿತ್ರಗಳ ಅರ್ಧ ಮಂಡಲ, ಹನ್ನೆರಡು ಪವಿತ್ರಗಳ ಮುಕ್ಕಾಲು ಮಂಡಲ, ಹದಿನಾರು ಪವಿತ್ರಗಳ ಪೂರ್ಣ ಮಂಡಲ. ಮಂಡಲದ ಪ್ರಮಾಣಕ್ಕನು ಸರಿಸಿ ಪಂಚವರ್ಣದ ಹುಡಿಯಿಂದ ವೈದ್ಯರು ಏಳು ಹೆಡೆಯ ಸರ್ಪದ ಮನೋಹರವಾದ ಆಕೃತಿಯನ್ನು ಪವಿತ್ರ ಗಂಟುಗಳ ಜೋಡಣೆಯಿಂದ ಬರೆಯುತ್ತಾರೆ. ಹೆಡೆಯ ಕೆಳಗೆ ವಿಷ್ಣುಪಾದವನ್ನು ಕಪ್ಪು ಬಣ್ಣದಲ್ಲಿ ಮೂಡಿಸಿರುತ್ತಾರೆ. ಹೆಡೆಯಿಂದ ಮೇಲೆ, ಪ್ರಭಾವಳಿಯ ಕೆಳಗೆ ಬ್ರಹ್ಮನ ಕಪಾಲಕ್ಕೆ ಗಣಪತಿಯ ರೂಪ ಕೊಡುತ್ತಾರೆ. ಮಂಡಲದ ಸುತ್ತ ಮೂರು ಇಂಚು ಅಗಲಕ್ಕೆ ಬಿಳಿ ಪಟ್ಟಿ ಹಾಕಿ ಕಪ್ಪುಬಣ್ಣದಲ್ಲಿ ದ್ರಾಕ್ಷಿಯ ಬಳ್ಳಿ, ಎಲೆ ಇತ್ಯಾದಿಗಳಿಂದ ಚಿತ್ರಿಸಿರುತ್ತಾರೆ. ಜಂಗಮ ಸೊಪ್ಪಿನ ಹುಡಿಯಿಂದ ದಂಡೆ ಕಟ್ಟಿ ಅದರ ಮೇಲೆ ಸ್ವಸ್ತಿಕ ಇರಿಸುತ್ತಾರೆ. ಪಕ್ಕದಲ್ಲಿ ತೆಂಗಿನ ಕಾಯಿ, ಹಿಂಗಾರ, ವೀಳ್ಯದೆಲೆ, ಅಡಿಕೆ, ಬಾಳೆಹಣ್ಣು ಇತ್ಯಾದಿಗಳನ್ನು ಇಟ್ಟು, ಪವಿತ್ರಕ್ಕೆ ಒಂದರಂತೆ ಕಾಲು ದೀಪಗಳನ್ನು ಬೆಳಗಿಸುತ್ತಾರೆ. ಬಿಳಿ ಬಣ್ಣದ ಹುಡಿಯಿಂದ ಮರಿ ಮೊಟ್ಟೆ ಚಿತ್ರಿಸಿ ಅದರ ಸುತ್ತಲೂ ಸೇವಂತಿಗೆ ಹೂಗಳನ್ನು ಇರಿಸುತ್ತಾರೆ.

ಸಂಜೆ ಮಂಡಲದಲ್ಲಿ ಪೂಜೆ ಆಗಿ ಬನದಲ್ಲಿ 'ಹಾಲಿಟ್ಟು ಸೇವೆ' ನಡೆಯುತ್ತದೆ. ನಾಗಬನದಲ್ಲಿ ಮಂಗಳಾರತಿ ಆದ ನಂತರ ವೈಭವದ ನಾಗಮಂಡಲೋತ್ಸವ ಪ್ರಾರಂಭ ವಾಗುತ್ತದೆ. ಶಿವನ ಕೈಯ ಡಮರು (ಢಕ್ಕೆ) ಶಿವ ಸ್ವರೂಪನಾಗಿದ್ದ ಶೇಷನ ಸೇವೆಗೆ ವೈದ್ಯರ ಕೈಗೆ ಬಂದ ಕಾರಣ ವೈದ್ಯರು ಇಲ್ಲಿ ಢಮರು ಸೇವೆ ನೆರವೇರಿಸುತ್ತಾರೆ. ನಾಗಬನದಿಂದ ತಂದ ದೀಪದಿಂದ ಮಂಡಲದ ದೀಪಗಳನ್ನು ಬೆಳಗಿಸುತ್ತಾರೆ. ಅರ್ಚಕರಿಂದ ಮಂಡಲಕ್ಕೆ ಷೋಡಶೋಪಾಚಾರ ಪೂಜೆ ನಡೆದು ಮಂಗಳಾರತಿಯ ನಂತರ ನಾಗದರ್ಶನ ಪಂಚವಾದ್ಯ ನಾಗಸ್ವರಗಳೊಂದಿಗೆ ಪ್ರಾರಂಭವಾಗುತ್ತದೆ. ಆಗ ವೈದ್ಯರ ರಂಗಪ್ರವೇಶವಾಗುತ್ತದೆ. ವೈದ್ಯರ ಮೇಳದಲ್ಲಿ ಅರ್ಧನಾರಿ ವೇಷ ತೊಟ್ಟು ಕೈಯಲ್ಲಿ ಕಂಚಿನ ಢಕ್ಕೆ ಹಿಡಿದವ ಮುಖ್ಯ ನರ್ತಕ. ಇನ್ನೊಬ್ಬ ಮರದ ಢಕ್ಕೆ ಹಿಡಿದವ ಸಹಾಯಕ ಕಂಚಿನ ತಾಳ ಹಿಡಿದವ ಪ್ರಧಾನ ವೈದ್ಯ ಅವನಿಗೂ ತಾಳ ಹಾಕಲು ಸಹಾಯಕರಿರುತ್ತಾರೆ. ಚೆಂಡೆ ವಾದ್ಯಗಳೂ ಸೇರಿ ನೃತ್ಯದ ಮೆರುಗನ್ನು ಹೆಚ್ಚಿಸುತ್ತವೆ.

ವಾದ್ಯ ವಿಶೇಷ ನಾಗ ಸ್ವರವು ಪುಂಗಿಯ ನಾದವನ್ನು ಹೊರಹೊಮ್ಮಿಸಿ ನಾಗಪಾತ್ರಿಯಲ್ಲಷ್ಟೆ ಅಲ್ಲದೆ ಜನಸ್ತೋಮದಲ್ಲೂ ಸರ್ಪ ಸಂಚಾರದ ತಲೆ–ಮೈ ನಲುಕಾಟದ ವಿಭ್ರಮೆ ಹುಟ್ಟು ಹಾಕುತ್ತದೆ. ವೈದ್ಯರ ಹಾಡುಗಳು ಹೆಚ್ಚಾಗಿ ಯಕ್ಷಗಾನದಲ್ಲಿ ಇದ್ದಂತೆಯೆ ಇದೆ. ಕನ್ನಡ ಪದ್ಯಗಳು ಹೆಚ್ಚು ಬಳಕೆಯಲ್ಲಿದ್ದು ಸಂಸ್ಕೃತ ಶ್ಲೋಕಗಳನ್ನು ಬಳಸಲಾಗುತ್ತದೆ. ಈ ಹಾಡಿನಲ್ಲಿ ನಾಗನ ವಂಶ, ಭೂ ಲೋಕಕ್ಕೆ ನಾಗಗಳ ಪ್ರವೇಶ, ಪ್ರಕೃತಿಯಿಂದ ನಾಗನಾಶ ಇದರಿಂದ ಲೋಕ ವಿನಾಶ ಮತ್ತು ನಾಗಸ್ತುತಿಯ ವಿಷಯಗಳು ಬಂದಿದೆ. ಆರಂಭದಲ್ಲಿ ಲಕ್ಷ್ಮೀನಾರಾಯಣನ ವಂದನೆ ಇದ್ದು ಮುಂದೆ ಬ್ರಹ್ಮ ರುದ್ರಾದಿಗಳ ಚಿಂತನೆಯ ಜೊತೆಗೆ ಗಣಪತಿ ಪ್ರಾರ್ಥನೆ ಇದೆ. ನಾಗಗಳ ಅಷ್ಟಕುಲ ಪರಿವಾರಗಳ ನೆನಪಿನ ಜೊತೆ ನಾಂದಿಯಾಗಲಿದೆ. ಅರ್ಧನಾರಿ ಪವಿತ್ರ ಗ್ರಂಥಿಯ (ಗಂಟು) ವಿನ್ಯಾಸವನ್ನು ಅನುಸರಿಸುತ್ತ ಓಡಾಡಿ, ಕೊನೆಗೆ ಗ್ರಂಥಿ ಹಾಕುವ, ಗ್ರಂಥಿ ಬಿಡಿಸುವ ಪ್ರಕ್ರಿಯೆಯನ್ನು ಅಭಿನಯಿಸುತ್ತಾ ನರ್ತನ ಕ್ರಿಯೆಯನ್ನು ಸಂಪನ್ನಗೊಳಿಸುತ್ತಾನೆ. ಇದು ಪ್ರಕೃತಿಪುರುಷರ ಸಮಾಗಮದ ಸಂಕೇತವಾಗಿದೆ. ವೈದ್ಯರ ಹಾಡುವ ಹಾಡುಗಳನ್ನು ಗಮನಿಸಿದಾಗ ಅದರಲ್ಲಿ ಒಮ್ಮೆ ಕಲಹ, ಒಮ್ಮೆ ಸ್ನೇಹ ಮತ್ತೊಮ್ಮೆ ದೀನತೆ, ಮಗದೊಮ್ಮೆ ಆಕ್ರೋಶ–ಹೀಗೆ ಬಹುಬಗೆಯ ಭಾವ ಪ್ರದರ್ಶನಗಳು ಕಂಡುಬರುತ್ತವೆ.

ನಾಗಮಂಡಲದಲ್ಲಿ ರಾಶಿ ರಾಶಿ ಹಿಂಗಾರ ಹೂವುಗಳು ಬಳಕೆಯಾಗುತ್ತದೆ. ಕೊನೆಗೆ ನಾಗಪಾತ್ರಿಗಳಿಂದ ವಾದ್ಯ ಘೋಷಗಳ ನಡುವೆ ಹಿಂಗಾರ ಸ್ನಾನ (ಹಿಂಗಾರವನ್ನು ಮುಖಕ್ಕೆ ತಿಕ್ಕಿಕೊಳ್ಳುವುದು) ವಾಗುತ್ತದೆ. ಇದಂತೂ ನೋಡುಗರ ಕಣ್ಣಿಗೆ ಬಲು ಸುಂದರ ದೃಶ್ಯವಾಗಿರುತ್ತದೆ. ನಂತರ ನಾಗಮಂಡಲ ನಡೆಸುವವರಿಗೆ ನುಡಿಕೊಟ್ಟು ಮಹಾ ಮಂಗಳಾರತಿಯಾಗಿ ಪ್ರಸಾದ ವಿತರಣೆಯಾಗುತ್ತದೆ. ಅಲ್ಲಿಂದ ಮಂಡಲದಲ್ಲಿ ಬೆಳಗಿದ ದೀಪವನ್ನು, ಪ್ರಸಾದವನ್ನು ವಾದ್ಯಮೇಳದೊಂದಿಗೆ ಯಜಮಾನನ ಮನೆಗೆ ಕೊಂಡೊಯ್ಯುತ್ತಾರೆ.

ನಾಗದೋಷಗಳ ನಿವಾರಣೆಗಾಗಿ, ಸರ್ವಾಭೀಷ್ಟ ಸಿದ್ಧಿಗಾಗಿ ನಡೆಸುವ ಫಲಪ್ರದ ಪೂಜೆ ನಾಗಮಂಡಲ. ಇದೀಗ ನಾಗಮಂಡಲವೊಂದು ಜನಾಕರ್ಷಕ ಶ್ರೀಮಂತ ಮಾಧ್ಯಮವಾಗಿ ಬೆಳೆಯುತ್ತಿರುವುದು ಕಲಿಯುಗದ ಮಹಿಮೆಯೇ ಸರಿ. ಇಂದು ನಾಗಮಂಡಲಕ್ಕೆ ಸುಮಾರು 50 ಲಕ್ಷ ರೂಪಾಯಿಯಿಂದ ಒಂದು ಕೋಟಿ ರೂಪಾಯಿವರೆಗೂ ಖರ್ಚು ಮಾಡುವವರಿದ್ದಾರೆ.

– **ಟಿ.ಎಸ್. ನಾಗರಾಜ ಉಪಾಧ್ಯಾಯ,** ವಾಮಂಜೂರು

# ದೇವರೆಲ್ಲಿರುವ?

**ಡಾ॥ ಶ್ರೀ ವೆಂಕಟರಮಣ,** ತಲಪಾಡಿ

ಪದುಮನಾಭ ತೆರಳಿದ ತಿರುಪತಿಗೆ
ಬಳಿಕ ತಿರುಮಲಕ್ಕೆ ಕಾಲುನಡಿಗೆ
ಸರತಿ ಸಾಲಿನಲ್ಲಿ ಕಾಯುವಿಕೆ
ಬಾಲಾಜಿ ಶ್ರೀನಿವಾಸನ ದರುಶನಕ್ಕೆ ॥1॥

ಬಂದೇ ಬಂತು ದೇವ ದರುಶನದ ಸರತಿ
ಗರ್ಭಗುಡಿಯ ಪ್ರವೇಶಿಸುವ ಆತನ ಸರತಿ
ಭಗವಂತನ ಸಾಮಿಪ್ಯ ಸಿಕ್ಕಿತವನಿಗೆ
ಎರಡು "ಜರಗಂಡಿ"ಗಳ ಕ್ಷಣಾರ್ಧದೊಳಗೆ ॥2॥

ಪದ್ಮನಾಭನಿಗೆ ನಾಕ ದೊರಕಿದ ಆನಂದ
ರೋಮಾಂಚನ ಹರುಷ ಮಹದಾನಂದ
ಕಣ್ಣರೆಪ್ಪೆಗಳ ಬಿಗಿದು ಮುಚ್ಚಿ ಪಡೆದನಾತ ಒಳದೃಷ್ಟಿ
ಭಗವಂತ ತನ್ನೊಳಗೇ ಇರುವನೆಂಬ ನಿಜದೃಷ್ಟಿ ॥3॥

ತಾಯಿ ಕುಸುಮಳ ಮುದ್ದು ಮಗು
ಹಸುಳೆಯದು ಅದರ ಮುಗ್ಧ ನಗು
ಕುಸುಮ ಕಾಣುವಳು ಅದರಲ್ಲೇ ಭಗವಂತನ
ಬಾಲರೂಪಿ ಅಚ್ಯುತಾನಂತ ಗೋವಿಂದನ ॥4॥

ಚಕ್ರಪಾಣಿಯೊಬ್ಬ ಕವಿ ಕಲ್ಪನಾ ವಿಲಾಸಿ
ಆತನಿಗೆ ದೇವರು ಪ್ರಕೃತಿಯ ಕಣಕಣದಲ್ಲೂ ವಾಸಿ
ಭಗವಂತನ ಎಲ್ಲಿರುವನೆಂಬುದಲ್ಲಿ ಅವನ ಪ್ರಶ್ನೆ
ಆತನೆಲ್ಲಿಲ್ಲನೆಂಬುದೇ ಸರಿಯಾದ ಪ್ರಶ್ನೆ ॥5॥

ದೇವರಿಲ್ಲ ಎನ್ನುತ್ತಿದ್ದ ಮೊದಲು ಕೆಂಪಣ್ಣ
ದೇವರೆಲ್ಲಿ ಎಂದು ಬಳಿಕ ಕೇಳಿದ ಈ ಅಣ್ಣ
ಜೀವನಾನುಭವ ಸೇರಿದಂತೆಲ್ಲ
ಅವನೆಂದ ಸಂತಸದಿಂದ "ದೇವರೇ ಎಲ್ಲ" ॥6॥

ದೇವರೊಂದು ಶಕ್ತಿ ವಿದ್ಯುತ್ತಿನಂತೆ
ಅವನ ಕಾರ್ಯವ ನೀವೇ ನೋಡುವಿರಂತೆ
ಸರ್ವವ್ಯಾಪಿ ಸರ್ವಶಕ್ತ ಜನ ನಂಬಿದಂತೆ
ಇಲ್ಲವೆಂದರೆ ಇಲ್ಲ ಇದ್ದಾನೆಂದರೆ ಇರುವನೆಂಬತೆ ॥7॥

ಎಲ್ಲವನ್ನು ಅವನಿಗೊಪ್ಪಿಸಿ ಬಿಡಿ ಚಿಂತೆ
ಪ್ರಸಾದ ಬುದ್ಧಿ ಬೆಳೆಸಿಕೊಳ್ಳಿ ಬಲ್ಲವರಂತೆ
ಕೆಲಸ ಮಾಡುವ ಹಕ್ಕು ಮಾತ್ರ ನಿಮಗೆ
ಅದರ ಪ್ರತಿಫಲ ದೇವ ಚಿತ್ತದೊಳಗೆ ॥8॥

**'ಜರಗಂಡಿ'** : ತೆಲುಗು ಭಾಷೆಯಲ್ಲಿ ಮುಂದೆ ಸರಿಯಿರಿ ಎಂಬ ಅರ್ಥದ ಪದ

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

# ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ , ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

ಉದ್ಯಮ :

**ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್**
21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು – 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ದ.ಕ. ಸಂಘದಿಂದ ಯುಗಾದಿ ಸಂಭ್ರಮ



ದಕ್ಷಿಣ ಕನ್ನಡಿಗರ ಸಂಘದ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಯುಗಾದಿ ಸಂಭ್ರಮ ಎಂಬ ಕಾರ್ಯಕ್ರಮವನ್ನು ಆಚರಿಸಲಾಯಯಿತು. ದಿನಾಂಕ 15–4–2018ರಂದು ಅಂದರೆ ಸೌರಮಾನ ಯುಗಾದಿ ಅಥವಾ ವಿಷುವಿನಂದೇ ಸಂಯೋಜಿಸಲಾಗಿದ್ದ ಈ ಸಮಾರಂಭ ಕನ್ನಡ ಭವನದ ನಯನ ಸಭಾಂಗಣದಲ್ಲಿ ಸಡಗರದಿಂದ ನಡೆಯಿತು. ಯುಗಾದಿ ಸಂಭ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಪುತ್ತಿಗೆ ಮಠಾಧೀಶರಾದ ಪೂಜ್ಯ ಶ್ರೀ ಸುಗುಣೇಂದ್ರ ತೀರ್ಥರು ವಹಿಸಿದ್ದು, ದ.ಕ.ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿ, ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಜನಪ್ರಿಯ ಸಂಘಟಕರು ಹಾಗೂ ಪತ್ರಕರ್ತರಾದ ಶ್ರೀ ರಾಘವೇಂದ್ರ ಎನ್. ಕಾಂಚನ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಲಾವಿದ ದಂಪತಿಗಳಾದ ಬಳಗಕ್ಕೆ ಚಿರ ಪರಿಚಿತ ಶ್ರೀ ಟಿ.ಎಸ್. ನಾಗರಾಜ ಉಪಾಧ್ಯಾಯ ಮತ್ತು ಶ್ರೀಮತಿ ಲೀಲಾವತಿ ಎನ್.ಉಪಾಧ್ಯಾಯ ಹಾಗೂ ಪ್ರಖ್ಯಾತ ಕಲಾವಿದ ಶ್ರೀ ನೀಲಕಂಠ ಅಡಿಗರವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಭಾಧ್ಯಕ್ಷತೆಯನ್ನು ದ.ಕ.ಸಂಘದ ಅಧ್ಯಕ್ಷರಾದ ಶ್ರೀ ಬಾ.ರಾಮಚಂದ್ರ ಉಪಾಧ್ಯರವರು ವಹಿಸಿದ್ದರು. ಶ್ರೀಯುತರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ದ.ಕ. ಸಂಘದ ಎಲ್ಲಾ ಚಟುವಟಿಕೆಗಳಿಗೆ ಸಹಕಾರ ಮತ್ತು ಬೆಂಬಲವನ್ನು ನೀಡುತ್ತಿರುವ ಸರ್ವ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷರಾದ ಡಾ.ಕೆ.ಸಿ. ಬಲ್ಲಾಳ್‌ರವರು ಎಲ್ಲರನ್ನೂ ಸ್ವಾಗತಿಸಿದರೆ, ಕಾರ್ಯದರ್ಶಿ ಶ್ರೀ ವೈ ಜಯಂತರಾವ್ ರವರು ವಂದನಾರ್ಪಣೆ ಮಾಡಿದರು. ಸಭಾ



ಕಾರ್ಯಕ್ರಮದ ನಂತರ ಏರ್ಪಡಿಸಿದ್ದ ಶೃತಿ ರಂಜಿನಿ ತಂಡದವರಿಂದ ಭಕ್ತಿ ನಮನ, ಶ್ರೀ ನೀಲಕಂಠ ಅಡಿಗರವರಿಂದ ಮನೋರಂಜನಾ ವೈವಿಧ್ಯ ಹಾಗೂ ನಾಗರಾಜ ಉಪಾಧ್ಯಾಯರವರ ನೇತೃತ್ವದ ಲೀಲಾ ನಾಟ್ಯ ವೃಂದದ ಕಲಾವಿದರಿಂದ ನೃತ್ಯ ವೈಭವ ಸಭಾಸದರ ಮನರಂಜಿಸಿದೆ.


# ತೌಳವ ಮಾಧ್ವಕೂಟದ ವಾರ್ಷಿಕೋತ್ಸವ

ತೌಳವ ಮಾಧ್ವ ಒಕ್ಕೂಟದ 5ನೇ ವಾರ್ಷಿಕೋತ್ಸವವು ದಿನಾಂಕ 27.5.2018 ರಂದು ಬೆಂಗಳೂರಿನ ಶ್ರೀ ಪುತ್ತಿಗೆ ಮಠದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

ಬೆಳಿಗ್ಗೆ 9 ಘಂಟೆಯಿಂದ ಆರಂಭವಾಗಿ ರಾತ್ರಿ 9 ಘಂಟೆಯವರೆಗೆ ನಡೆದ ಕಾರ್ಯಕ್ರಮದಲ್ಲಿ ಸದಸ್ಯರಿಗೆ ವಿವಿಧ ಒಳಾಂಗಣ ಆಟಗಳ ಸ್ಪರ್ಧೆಗಳು, ಸದಸ್ಯರಿಂದ ವಿವಿಧ ಮನೋರಂಜನೆ, ತುಳು ಸಾಮಾಜಿಕ ನಾಟಕ ಹಾಗೂ ವರಾಹ, ನರಸಿಂಹ ಅವತಾರ ಮಹಿಮೆ ಎಂಬ ಯಕ್ಷಗಾನವೂ ಪ್ರದರ್ಶಿತವಾಗಿತ್ತು. ಸಭಾ ಕಾರ್ಯಕ್ರಮದ




ದಿವ್ಯ ಸಾನ್ನಿಧ್ಯವನ್ನು ಶ್ರೀ ಪುತ್ತಿಗೆ ಮಠಾಧೀಶರಾದ ಪೂಜ್ಯ ಶ್ರೀ ಸುಗಣೇಂದ್ರ ತೀರ್ಥ ಶ್ರೀಪಾದರು ವಹಿಸಿದ್ದು, ಅನುಗ್ರಹ ಸಂದೇಶವನ್ನು ನೀಡಿದರು. ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. 2018ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ವಿದ್ವಾನ್ ಶ್ರೀ. ಟಿ. ರಾಮಕೃಷ್ಣ ಕೇಕುಡರವರಿಗೆ ಈ ವರ್ಷದ ತೌಳದ ಮಾಧ್ವ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು. ಬೆಳಗಿನ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿಯ ಭೋಜನದ ವ್ಯವಸ್ಥೆಯನ್ನು ಮಾಡಿದ್ದು, ಒಕ್ಕೂಟದ ಎಲ್ಲಾ ಸದಸ್ಯರು ದಿನಪೂರ್ತಿಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಹಾಗೂ ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು.


# ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.



ಶುಭಾಶಯಗಳನ್ನು ಕೋರುವವರು :



# ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

**ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು, ಉತ್ತಮ ದಾವಣಿ, ಮಗುಟ, ಮಡಿಪಂಚೆ, ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು, ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.**

ಸ್ಥಾಪಕರು : ದಿವಂಗತ ಟಿ. ಆರ್. ಕೇಕುಡ



ಶುಭಾಶಯಗಳನ್ನು ಕೋರುವವರು

॥ ಹರಿಃ ಓಂ ॥



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

**ಆರೋಗ್ಯ ಕಾಳಜಿ : 7**

# ಮಕ್ಕಳಿಗೆ ಆಹಾರ

ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಮತೋಲನ ಆಹಾರ ಕೊಡುವುದು ಅತ್ಯವಶ್ಯಕ. ಸರಿಯಾದ ಆಹಾರ ದೊರಕದಿದ್ದರೆ ಬೆಳವಣಿಗೆಯಲ್ಲಿ ನ್ಯೂನತೆ ಉಂಟಾಗುತ್ತದೆ ಹಾಗೂ ರೋಗನಿರೋಧಕ ಶಕ್ತಿ ಕಡಿಮೆಯಾಗಿ ಪದೇ ಪದೇ ಸೋಂಕು ತಗಲುತ್ತದೆ. ಸೋಂಕಿನಿಂದಾಗಿ ಪುನಃ ಊಟ ತಿಂಡಿ ತಿನ್ನುವುದು ಕಡಿಮೆಯಾಗುತ್ತದೆ. ನಿಶಕ್ತಿ ಜಾಸ್ತಿ ಆಗುತ್ತದೆ. ಆಹಾರದ ಕೊರತೆಯಿಂದಾಗಿ ದೇಹದಲ್ಲಿನ ವಿಟಮಿನ್ಸ್, ಪ್ರೋಟಿನ್ ಕಡಿಮೆಯಾಗಿ ಈ ಕೆಳಕಂಡ ತೊಂದರೆಗಳು ತಲೆದೋರುತ್ತದೆ. – ತಲೆಕೂದಲು ಉದುರುವುದು, ಬಣ್ಣ ಮಾಸುವುದು, ಚರ್ಮ ಒರಟಾಗುವುದು, ಆರೋಗ್ಯಕರ ತ್ವಚೆ ಕಡಿಮೆಯಾಗುವುದು, ಮಾಂಸಖಂಡಗಳಲ್ಲಿ ಶಕ್ತಿ ಕಡಿಮೆಯಾಗುವುದು, ರಕ್ತಹೀನತೆ ಕಾಣಿಸಿಕೊಳ್ಳುವುದು, ಮಾನಸಿಕ ಆರೋಗ್ಯ ಕಡಿಮೆಯಾಗಿ ಏಕಾಗ್ರತೆ, ನೆಮ್ಮದಿ, ಶಾಂತಿ, ಆಸಕ್ತಿ, ಒತ್ತೆಹೀನ ಶಕ್ತಿ ಕಡಿಮೆಯಾಗುತ್ತದೆ. ಓದಿನಲ್ಲಿ, ಆಟಗಳಲ್ಲಿ ಹಿಂದಿರುತ್ತಾರೆ. ವಿಟಮಿನ್ 'ಎ' ನ ಕೊರತೆಯಿಂದಾಗಿ ಇರುಳು ಕುರುಡುತನ, ಕೆರಟೋಮಲೇಸಿಯಾ ಉಂಟಾಗುತ್ತದೆ.

ವಿಟಮಿನ್ 'ಸಿ' ಕೊರತೆಯಿಂದಾಗಿ, ಒಸಡಿನಿಂದ ರಕ್ತಸ್ರಾವವಾಗುತ್ತದೆ ಮತ್ತು ಸ್ಕರ್‌ವಿ ತಲೆದೋರುತ್ತದೆ. ವಿಟಮಿನ್ 'ಬಿ' ಕೊರತೆಯಿಂದಾಗಿ ಪೆಲೆಗ್ರಾ, ಬೇರಿಬೇರಿ, ಗ್ಲೋಸೈಟಿನ್, ಬಾಯಿಹುಣ್ಣು ಬರುತ್ತದೆ. ವಿಟಮಿನ್ 'ಡಿ' ಕೊರತೆಯಿಂದಾಗಿ 'ರಿಕೆಟ್ಸ್' ಉಂಟಾಗುತ್ತದೆ. ಕಬ್ಬಿಣದ ಅಂಶ ಕಡಿಮೆಯಿಂದಾಗಿ ರಕ್ತಹೀನತೆ ಉಂಟಾಗುತ್ತದೆ. ಜಿಂಕ್ ಕೊರತೆಯಿಂದಾಗಿ ಗಾಯ ಬೇಗನೆ ವಾಸಿಯಾಗುವುದಿಲ್ಲ. ನಾರು ಕಡಿಮೆಯಾದಲ್ಲಿ ಮಲಬದ್ಧತೆ ತಲೆದೋರುತ್ತದೆ. ಮಕ್ಕಳಿಗೆ ಸ್ವಾದಿಷ್ಟವಾದ ಪೌಷ್ಠಿಕಾಂಶ ಆಹಾರ ಕೊಡುವುದು ತುಂಬಾ ಅವಶ್ಯಕ.

ಅಂಗಡಿಗಳಲ್ಲಿ ಸಿಗುವ ರೆಡಿಮೇಡ್ ತಿಂಡಿಗಳಲ್ಲಿ ಎಣ್ಣೆ ಜಾಸ್ತಿ ಇರುತ್ತದೆ. ಪೌಷ್ಠಿಕ ಅಂಶಗಳು ತುಂಬಾ ಕಡಿಮೆಯಾಗಿರುತ್ತದೆ. ಕುರ್‌ಕುರೆ, ಚಿಪ್ಸ್, ವೇಫರ್ ಇತ್ಯಾದಿ. ಆದಷ್ಟು ಮನೆಯಲ್ಲಿ ತಯಾರಿಸಿದ ಪದಾರ್ಥಗಳನ್ನು ಕೊಡುವುದು ಒಳ್ಳೆಯದು. ಪ್ರತಿನಿತ್ಯ ತರಕಾರಿ, ಬೇಳೆಕಾಳು, ಕಡಲೆಬೀಜ, ಹಣ್ಣು, ಹಾಲು ಕೊಡಲೇಬೇಕು. 3 ವರ್ಷ – 12 ವರ್ಷದೊಳಗಿನ ಮಕ್ಕಳಿಗೆ ಸುಮಾರು 150 ಗ್ರಾಂ – 300 ಗ್ರಾಂ ಧಾನ್ಯಗಳು (ಅನ್ನ, ಚಪಾತಿ), ದ್ವಿದಳ ಧಾನ್ಯ (ಬೇಳೆಕಾಳು) 30 ಗ್ರಾಂ – 60 ಗ್ರಾಂ, ಹುರಿದ ಕಡಲೆಬೀಜ 30 ಗ್ರಾಂ – 60 ಗ್ರಾಂ, ಹಾಲು ಮೊಸರು 450 ಮಿಲಿ, ಹಸಿರು ಸೊಪ್ಪು 45 ಗ್ರಾಂ – 90 ಗ್ರಾಂ, ಇತರೆ ತರಕಾರಿ 80 ಗ್ರಾಂ –120 ಗ್ರಾಂ, ಬೆಣ್ಣೆ ತುಪ್ಪ 15 ಗ್ರಾಂ – 30 ಗ್ರಾಂ ಕೊಡಬೇಕು. ಅದು ಮನೆಯ ಎಲ್ಲ ಸದಸ್ಯರು ಒಟ್ಟಿಗೆ ಕೂತು ಊಟ ತಿಂಡಿ ಮಾಡುವುದು ಒಳ್ಳೆಯದು. ದೊಡ್ಡವರು ಮಕ್ಕಳ ಎದುರು ಈ ತರಕಾರಿ ಬೇಡ, ಈ ಪದಾರ್ಥ ತಿನ್ನುವುದಿಲ್ಲ ಎಂದೆಲ್ಲ ಹೇಳಬಾರದು. ಮಕ್ಕಳು ದೊಡ್ಡವರನ್ನು ಗೊತ್ತಿಲ್ಲದೆ ಅನುಕರಿಸುತ್ತದೆ. ಆಹಾರ ಸೇವನೆ ಸಮಯದಲ್ಲಿ ಮಕ್ಕಳಿಗೆ ಬೈಯ್ಯುವುದು, ನಿಂದಿಸುವುದು ಮಾಡಬಾರದು. ಪೌಷ್ಠಿಕ ಅಂಶವಿರುವ ಆಹಾರ ಸೇವನೆಯಿಂದ ಆಗುವ ಪ್ರಯೋಗಗಳನ್ನು ತಿಳಿಸಬೇಕು. ಮಕ್ಕಳಿಗೆ ಹಾಲು ಸೇರದೆ ಇದ್ದರೆ ಮೊಸರು ಕೊಡಬೇಕು. ಮಕ್ಕಳು ಸರಿಯಾಗಿ ಊಟ, ತಿಂಡಿ ತಿಂದರೆ ಸಕಾರಾತ್ಮಕ ಗುಣಗಾನ ಮಾಡಬೇಕು. ಆದಷ್ಟು ಟಿ.ವಿ. ಮುಂದೆ ಕುಳಿತು ತಿನ್ನುವುದನ್ನು ಕಡಿಮೆ ಮಾಡಬೇಕು.

**– ಡಾ. ನಾಗೇಂದ್ರ ಹೆಬ್ಬಾರ್**

(ಇನ್ನೊಂದು ಟಿಪ್ಸ್ : ಮುಂದಿನ ಸಂಚಿಕೆಯಲ್ಲಿ)

## ಆನಂದ ಬಳಗದ ಕಚೇರಿ ಸ್ಥಳಾಂತರ

ಆನಂದ ಬಳಗವು ಕಳೆದ ಹಲವಾರು ವರ್ಷಗಳಿಂದ ಕುಮಾರಪಾರ್ಕ್ (ಪೂರ್ವ) ದಲ್ಲಿರುವ ಜೀವನ್ ಬಿಲ್ಡಿಂಗ್ಸ್‌ನ ಮೂರನೇ ಮಹಡಿಯಲ್ಲಿ ತನ್ನ ಕಚೇರಿಯನ್ನು ಹೊಂದಿದ್ದು, ದಿನಾಂಕ 1.4.2018 ರಿಂದ ಬಳಗದ ಕಚೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ:

**ಆನಂದ ಬಳಗ (ರಿ.)**
ಹೋಟೆಲ್ ಅಜಂತಾ ಆವರಣ, 22ಎ,
ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001.
(ದೂ: 080–25594457).

ಬಳಗದ ಸದಸ್ಯರು ದಯವಿಟ್ಟು ಕಚೇರಿ ಸ್ಥಳಾಂತರದ ವಿಚಾರವನ್ನು ಗಮನಿಸಿ, ಹೊಸ ಕಚೇರಿಯ ವಿಳಾಸಕ್ಕೆ ಪತ್ರ, ವ್ಯವಹಾರವನ್ನು ಮಾಡಬೇಕಾಗಿ ವಿನಂತಿ.

ಕಾರ್ಯದರ್ಶಿ, **ಆನಂದಬಳಗ**

# ಶ್ರದ್ಧಾಳುಗಳಿಗಾಗಿ – ಹನ್ನೊಂದು ಶಾಂತಿ ಕರ್ಮಾಂಗಗಳು

ಮಾನವ ಜೀವಿತಾವಧಿಯಲ್ಲಿ ಪವಿತ್ರವಾದ ಷೋಡಶ ಸಂಸ್ಕಾರಗಳನ್ನು ಪುರೋಹಿತ ಮುಖೇನ ಮಾಡಿಸಿಕೊಳ್ಳ ಬೇಕೆನ್ನುವುದನ್ನು ಸ್ಮೃತಿಗಳಲ್ಲಿ ಹಾಗೂ ಗೃಹ್ಯ ಸೂತ್ರಗಳಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಶ್ರದ್ಧಾಳುಗಳು ಅದನ್ನು ಮಾಡಿಸಿಕೊಳ್ಳುವುದರಿಂದ ಅವರ ಸಂಪೂರ್ಣ ಜೀವಿತಾವಧಿಯು ಆನಂದದಾಯಕವಾಗಿಯೂ, ಸುಖ ಸಂತೋಷಗಳಿಂದ ಕೂಡಿದುದಾಗಿಯೂ ಇರುವುದೆಂಬ ವೇದಮೂಲದ ಸ್ಮೃತಿವಾಕ್ಯವಿದೆ. ಗರ್ಭದಾನದಿಂದಾರಂಭಿಸಿ ಒಟ್ಟು 16 ಶುಭ ಷೋಡಶ ಕರ್ಮಾಂಗಗಳು ಆಚರಣಾ ಯೋಗ್ಯವಾಗಿರುವುದನ್ನು ಋಷಿ ಪ್ರಣೀತ ಸ್ಮೃತಿ ನಿರ್ದಿಷ್ಟವಾಗಿ ಬೊಟ್ಟುಮಾಡಿ ತೋರಿಸಿದೆ. ಕಲಶ ಗ್ರಹಣವೆಂಬ ಕರ್ಮಾಂಗದ ಮೂಲಕ ಗರ್ಭದಾನದ ಪ್ರಕ್ರಿಯೆಗೆ ಚಾಲನೆ ಸಿಗುತ್ತದೆ. ಮುಂದಿನ ಕರ್ಮಾಂಗಗಳಾಗಿ ಪುಂಸವನ, ಅನಮಲೋಭನ, ಸೀಮಂತ – ವಿಷ್ಣುಬಲಿ ಸಂಸ್ಕಾರ ಕ್ರಿಯೆಯ ನಂತರ ಮಗುವಿನ ಜನನವಾಗುವುದು. ಜನನಾನಂತರ ಜಾತಕರ್ಮ ಸಂಸ್ಕಾರ ಅರ್ಥಾತ್ ನಾಮಕರಣ – ಉಪನ್ನಿಷ್ಕ್ರಮಣ ಪ್ರಯೋಗ, ಅನ್ನಪ್ರಾಶನ ಚೌಲಕರ್ಮ ಸಂಸ್ಕಾರ ಹಾಗೂ ಉಪನಯನ ಸಂಸ್ಕಾರದ ನಂತರದ ವಿಧಿಯೆಂದರೆ ವಿವಾಹ ಪೂರ್ವ ಸಮಾವರ್ತನವಿಧಿ – ಅನಂತರವೇ ಬಾಳು ಬೆಳಗುವ ವಿವಾಹ ವಿಧಿ – (ಪ್ರಯೋಗ) ಇಲ್ಲಿಯವರೆಗಿನ ಹಂತವನ್ನು ಪೂರೈಸಿದ ನಂತರ ಕರ್ತೃವಿನ 50ನೇ ವರ್ಷದಿಂದಾರಂಭ ಗೊಳ್ಳುವ ಶುಭ ಶಾಂತಿ ಕರ್ಮಾಂಗಗಳು. ವೇದ ಮೂಲದಿಂದ ಉದ್ಧರಿಸಲ್ಪಟ್ಟವುಗಳಾಗಿವೆ.

ಐವತ್ತನೆ ವರ್ಷದಲ್ಲಿ ಆರಂಭಗೊಂಡು – ಮುಂದೆ – ಪ್ರತಿ ಐದು ವರ್ಷಕ್ಕೊಮ್ಮೆ ಆಚರಿಸಬಹುದಾದ ಶಾಂತಿ ಕರ್ಮಾಂಗಗಳು ಈ ವಿಧದಲ್ಲಿ ಉಲ್ಲೇಖಿಸಲ್ಪಟ್ಟಿದೆ.

"ವೈಷ್ಣವೀ ವಾರುಣೀ ಚೈವ, ತತಶ್ಚೋಗರಥೀತಥಃ ಮಹಾರಥಿ – ಭೀಮರಥಿ, ಇಂದ್ರಿ ಚೈವ ವಿಶೇಷತಾಃ – ಚಾಂದ್ರಿ ದರ್ಶನಿಕಿ – ರೌದ್ರಿ – ಸೌರಿ – ಮೃತ್ಯುಂಜಯ ತಥಾ, – ಮಹಾ ಮೃತ್ಯುಂಜಯೀ ಶಾಂತಿ ಕ್ರಮೇಣ ಪರಿಕೀರ್ತಿತಾ."

ಮನುಷ್ಯ ಜೀವನದಲ್ಲಿ ಪುರೋಹಿತ ಮುಖೇನ ಆಚರಿಸಬಹುದಾದ ಶಾಂತಿಗಳಲ್ಲಿ ಪ್ರಥಮವಾಗಿ 50ನೇ ವರ್ಷದಲ್ಲಿ ಆಚರಿಸುವ "ವೈಷ್ಣವೀಶಾಂತಿ" ಆಚರಣಾ ಯೋಗ್ಯವಾಗಿದೆ. ಎರಡನೆಯದಾಗಿ 55ನೇ ವರ್ಷದಲ್ಲಿ ಆಚರಿಸಬಹುದಾದ "ವರುಣಶಾಂತಿ", ಮೂರನೇಯದಾಗಿ 60ನೇ ವರ್ಷದಲ್ಲಿ ಆಚರಿಸಬಹುದಾದ "ಉಗ್ರರಥ ಶಾಂತಿ" – ಈ ಶಾಂತಿಯ ಆಚರಣೆ ಮನುಷ್ಯ ಜೀವನದ ಪ್ರಮುಖ ಘಟ್ಟದಲ್ಲೊಂದಾಗಿದೆ. ಷಷ್ಟಿಪೂರ್ತಿ ಶಾಂತಿಯು ಅವಶ್ಯಮಾಡಿಸಿಕೊಳ್ಳಲೇಬೇಕು ನಾಲ್ಕನೇಯದಾಗಿ 65ನೇ ವಯಸ್ಸಿನಲ್ಲಿ "ಮಹಾರಥ ಶಾಂತಿ"ಯಾದರೆ ಮುಂದೆ 70ನೇ ವಯಸ್ಸಿನಲ್ಲಿ "ಭೀಮರಥ ಶಾಂತಿ" – ಎಪ್ಪತ್ತನೇ ವಯಸ್ಸಿನಲ್ಲಿ ಶಾಂತಿಯೆಂದರೆ ಅದೊಂದು ಪ್ರಮುಖ ಘಟ್ಟವಾಗಿರುತ್ತದೆ. 75ನೇ ವಯಸ್ಸಿನಲ್ಲಿ ಇಂದ್ರ ಶಾಂತಿಯೆನ್ನುವುದು ಆಚರಣಾಯೋಗ್ಯವಾಗಿದೆ. 80ನೇ ವರ್ಷವೆಂದರೆ ಸಹಸ್ರ ಚಂದ್ರದರ್ಶನವೆನ್ನುವ ಹೆಸರಿನಿಂದ ಕರೆಯಲ್ಪಡುವುದಾಗಿದೆ.

85ನೇ ವರ್ಷದಲ್ಲಿ "ರೌದ್ರಿ ಶಾಂತಿ" ಆಚರಿಸಲ್ಪಡಬೇಕು. ಮುಂದೆ 90ನೇ ವರ್ಷದಲ್ಲಿ "ಸೌರಶಾಂತಿ"ಎಂಬ ಹೆಸರಿನಲ್ಲಿ ಶಾಂತಿ ಕಾರ್ಯಕ್ರಮ ಆಯೋಜಿಸುವುದು ಸಂಪ್ರದಾಯ. 95ನೇ ವರ್ಷ ಆಚರಣೆಯು ಶಾಂತಿಯೆಂದರೆ, ಮೃತ್ಯುಂಜಯ ಶಾಂತಿಯಾಗಿರುತ್ತದೆ ಹಾಗೂ 100ನೇ ವರ್ಷದಲ್ಲಿ ಮಹಾ ಮೃತ್ಯುಂಜಯ ಶಾಂತಿಯ ಆಚರಣೆ ಸರ್ವ ಶ್ರೇಷ್ಠವಾಗಿ ಆಚರಿಸಲ್ಪಡಬಹುದು. ಈ ಎಲ್ಲಾ ಧಾರ್ಮಿಕ ವಿಧಿ ವಿಧಾನದ ಶಾಂತಿ ಕರ್ಮಾಂಗಗಳು ಸೂಕ್ತ ಪುರೋಹಿತರ ಮಾರ್ಗದರ್ಶನದಲ್ಲಿ ಆಚರಿಸಲ್ಪಟ್ಟಲ್ಲಿ ಮನಸ್ಸಿಗೂ ಶಾಂತಿಯನ್ನು ನೀಡುತ್ತದೆ ಹಾಗೂ ದೇವತೆಗಳೂ ಸಂತೃಪ್ತರಾಗಿ ಸಂಪೂರ್ಣಾಶೀರ್ವಾದ ನೀಡುತ್ತಾರೆ.

**ಕೋಟೇಶ್ವರ ಸೂರ್ಯನಾರಾಯಣ ರಾವ್**

## ದೇವರು ದೊಡ್ಡವ !!

ಒಬ್ಬ 80 ವರ್ಷದ ಮುದುಕನಿಗೆ ಹೃದಯದ ಆಪರೇಶನ್ ಆಯ್ತು. ಆಸ್ಪತ್ರೆ ಬಿಲ್ಲು 8 ಲಕ್ಷ ಬಿಲ್ಲು ನೋಡಿ ಮುದುಕ ಕಣ್ಣೀರು ಹಾಕಿದ. ಅದನ್ನು ಕಂಡ ವೈದ್ಯರು ಹೇಳಿದರು ಅಳಬೇಡಿ, ನಿಮ್ಮ ಬಿಲ್ಲು ಸ್ವಲ್ಪ ಕಡಿಮೆ ಮಾಡುತ್ತೇನೆ. ಸರ್ ಈ ಬಿಲ್ಲು ತುಂಬಾ ಕಡಿಮೆ. 10 ಲಕ್ಷ ಆದರೂ ತುಂಬುವ ಯೋಗ್ಯತೆ ನನಗಿದೆ. ನಾನು ಅತ್ತಿದ್ದು ಅದಕ್ಕಲ್ಲ. ಯಾಕಂದ್ರೆ ಆ ಪರಮಾತ್ಮ 80 ವರ್ಷ ನನ್ನ ಹೃದಯವನ್ನು ಕಾಪಾಡಿದ್ದಕ್ಕೆ ಯಾವುದೇ ಬಿಲ್ಲು ನನಗೆ ಕಳಿಸಲಿಲ್ಲ. ನೀವು ಕೇವಲ 3 ಗಂಟೆ ನನ್ನ ಹೃದಯದ ಫಂಕ್ಷನಿಂಗ್ ನೋಡಿಕೊಂಡಿದ್ದಕ್ಕೆ 8 ಲಕ್ಷ ರೂಪಾಯಿಯೇ...? ಓ ದೇವರೆ ನೀನು ಗ್ರೇಟ್.

# ಆನಂದ ಬಳಗ (ರಿ)

ಹೋಟೆಲ್ ಅಜಂತಾ ಆವರಣ, 22 'ಎ', ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು – 560 001

## ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಆನಂದ ಬಳಗ (ರಿ) ಬೆಂಗಳೂರು ಇದರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 09.09.2018ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ :

1. ಪ್ರಾರ್ಥನೆ
2. ಸಭೆಯ ಅಧಿಕೃತ ಚಾಲನೆ – ಅಧ್ಯಕ್ಷರಿಂದ
3. ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು.
4. ಸ್ವಾಗತ ಭಾಷಣ
5. 2017–18ನೇ ಸಾಲಿನಲ್ಲಿ ಅಗಲಿದ ಬಳಗದ ಸದಸ್ಯರಿಗೆ ಶ್ರದ್ಧಾಂಜಲಿ.
6. 2016–17ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಓದಿ ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
7. 2017–18ನೇ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ, ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
8. 31 ಮಾರ್ಚ್ 2018ರಂದು ಮುಕ್ತಾಯವಾದ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಪರಿಶೀಲನೆ ಮತ್ತು ಅಂಗೀಕಾರ.
9. 2018–19ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ.
10. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಬಗ್ಗೆ ಪ್ರಸ್ತಾವನೆ ಮತ್ತು ವಿಚಾರ ವಿನಿಮಯ
11. ವಂದನಾರ್ಪಣೆ

ಸದಸ್ಯರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಹಾಜರಿರಬೇಕಾಗಿ ಕೋರಿಕೆ.

ಬೆಂಗಳೂರು
ದಿನಾಂಕ 30–06–2018

**ಶಿವಪುರ ಹರಿದಾಸ ಉಪಾಧ್ಯ**
ಕಾರ್ಯದರ್ಶಿ

---

**ವಿಶೇಷ ಸೂಚನೆಗಳು**

1. ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು ಮಹಾಸಭೆಯ ಒಂದು ವಾರದ ಮುಂಚಿತವಾಗಿ ತಮ್ಮ ಪ್ರಶ್ನೆಗಳನ್ನು ಲಿಖಿತ ಮುಖೇನ ಆನಂದಬಳಗದ ಕಛೇರಿಗೆ ಕಳುಹಿಸತಕ್ಕದ್ದು.
2. 2017–18ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಈಮೇಲ್ ಮೂಲಕ ಸದಸ್ಯರುಗಳಿಗೆ ಕಳುಹಿಸಲಾಗುವುದು.



# ಸುದ್ಧಿ ಸಂಗ್ರಹ

☞ ಬಳಗದ ಅಧ್ಯಕ್ಷೆಯಾಗಿರುವ ಶ್ರೀಮತಿ ಗೀತಾ ವಾಸುದೇವ ರಾವ್ ಮತ್ತು ಶ್ರೀ ಕೆ. ವಾಸುದೇವರಾವ್ ರವರ ಮೊಮ್ಮಗ (ಶ್ರೀ ಕೆ. ರಾಮಕೃಷ್ಣ ರಾವ್ ಮತ್ತು ಶ್ರೀಮತಿ ಕಮಲ ದಂಪತಿಗಳ ಸುಪುತ್ರ) ಚಿ.ಕೆ. ಈಶ್ವರ ರಾವ್ ಎಂಬ ವಟುವಿನ ಬ್ರಹ್ಮೋಪದೇಶ ಕಾರ್ಯಕ್ರಮವು ದಿ. 19.4.2018 ರಂದು ಚೆನ್ನೈನಲ್ಲಿರುವ 'ಬೃಂದಾವನ' ದಲ್ಲಿ ವಿಜೃಂಭಣೆಯಿಂದ ನೆರವೇರಿದೆ ಬಳಗದ ಸದಸ್ಯರು ಸೇರಿದಂತೆ ನೂರಾರು ಅತಿಥಿಗಳು ಈ ಸಂಭ್ರಮದಲ್ಲಿ ಪಾಲ್ಗೊಂಡು ವಟುವನ್ನು ಆಶೀರ್ವದಿಸಿರುತ್ತಾರೆ.

☞ ಬಳಗದ ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರಾದ ಶ್ರೀ ಕೆ.ಎನ್. ಅಡಿಗ ಮತ್ತು ಶ್ರೀಮತಿ ರಾಜೇಶ್ವರಿ ಅಡಿಗರವರ ಸುಪುತ್ರ ಚಿ. ಭರತ್ ಅವರ ವಿವಾಹ ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಅನಂತ ಕೃಷ್ಣ ಭಟ್‌ರವರ ಸುಪುತ್ರಿ ಸೌ. ಅಪೇಕ್ಷಾ ಅವರೊಂದಿಗೆ ದಿ 9.4.2018ರಂದು ಜಯನಗರದ ಚಾಮರಾಜು ಕಲ್ಯಾಣ ಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಆರತಕ್ಷತೆಯು ಅದೇ ದಿನ ಸಂಜೆ ನಡೆದಿತ್ತು.

☞ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಪಿ.ಜಿ.ಮುರಳಿಕೃಷ್ಣ ಮತ್ತು ಶ್ರೀಮತಿ ರೇವತಿಯವರ ಸುಪುತ್ರ ಚಿ. ಅಕ್ಷಯ ಕೃಷ್ಣ ಎಂಬ ವಟುವಿನ ಉಪನಯನವು ದಿ.22.4.2018 ರಂದು ಬಸವನ ಗುಡಿಯ ಶ್ರೀ ಪುತ್ತಿಗೆ ಮಠ ಗೋವರ್ಧನ ಗಿರಿ ಕ್ಷೇತ್ರದಲ್ಲಿ ವಿಧ್ಯುಕ್ತವಾಗಿ ನೆರವೇರಿದೆ.

☞ **ಜಿ.ಎಸ್.ಪವರ್ ಸಿಸ್ಟಮ್ಸ್‌ನ ನೂತನ ಕಚೇರಿ** : ಬಳಗದ ಮೆಂಬರ್‌ಶಿಪ್ ಡೆವೆಲಪ್‌ಮೆಂಟ್ ವಿಭಾಗದ ಸಂಚಾಲಕರಾಗಿರುವ ಶ್ರೀ ಎಂ.ಕೆ. ಗುರುಮೂರ್ತಿಯವರ ಮಾಲಿಕತ್ವದ ಜಿ.ಎಸ್.ಪವರ್ ಸಿಸ್ಟಮ್ಸ್ ಸಂಸ್ಥೆಯ ಸ್ವಂತ ನೂತನ ಕಚೇರಿ "ಗುರುಕೃಪಾ" ದಿನಾಂಕ 30.4.2018 ರ ಸೋಮವಾರ ಉದ್ಘಾಟನೆಗೊಂಡಿರುತ್ತದೆ. ಬನಶಂಕರಿ 100 ಅಡಿ ರಸ್ತೆಯಲ್ಲಿರುವ ಅತ್ಯಂತ ಸುಸಜ್ಜಿತ ಕಚೇರಿ ಉದ್ಘಾಟನೆ ಪ್ರಯುಕ್ತ ಹಿಂದಿನ ದಿನ ವಾಸ್ತು, ರಕ್ಷೋಘ್ನಾದಿ ಹೋಮಗಳು ವಿಧ್ಯುಕ್ತವಾಗಿ ನಡೆದಿದ್ದು, ಮಾರನೇ ದಿನ ಗಣ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ನೆರವೇರಿದೆ.

☞ ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀಮತಿ ಸತ್ಯಭಾಮ ಮತ್ತು ವಿ. ಸ್ವರ್ಣಬಿಂದುರವರ ಪ್ರಥಮ ಪುತ್ರ ಚಿ. ಸುಧನ್ವ ಎಸ್. ಇವರ ಮದುವೆ ಚಿ. ಸೌ. ಅನುರಾಧಾ ಎಂಬ ವಧುವಿನೊಂದಿಗೆ ದಿ.25.4.2018 ರಂದು ಮಂಗಳೂರಿನ ಕುಳಾಯಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಆ ಬಗ್ಗೆ ಬೀಗರ ಔತಣವು ಅತ್ತಿಬೆಲೆ ಸಮೀಪದ ಕ್ವೀನ್ಸ್ ವ್ಯಾಲಿಯಲ್ಲಿರುವ ವರನ ಸ್ವಗೃಹದಲ್ಲಿ ದಿ. 29.4.2018 ರಂದು ನಡೆಯಿತು.

☞ ಬಳಗದ ಹಿರಿಯ ಸದಸ್ಯರಾದ ಶ್ರೀ ವಿ. ಪದ್ಮನಾಭ ಕೆದಿಲಾಯರವರು ಸಂಜಯ ನಗರದ ಜ್ಯುಡಿಷಿಯಲ್ ಲೇಔಟ್‌ನಲ್ಲಿ ನೂತನವಾಗಿ ನಿರ್ಮಿಸಿದ ನವೀಕೃತ "ಪದ್ಮ–ಕೃಪಾ" ಮನೆಯ ಗೃಹ ಪ್ರವೇಶ ಸಮಾರಂಭ ದಿ. 28.4.2018 ರಂದು ವಿಜೃಂಭಣೆಯಿಂದ ನೆರವೇರಿದೆ. ಬಂದ ಅತಿಥಿಗಳಿಗೆ ವಿವಿಧ ಉಪಯುಕ್ತ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿರುವುದು ಶ್ರೀ ಕೆದಿಲಾಯರಿಗೆ ಜ್ಞಾನ ಪ್ರಸರಣದಲ್ಲಿರುವ ವಿಶೇಷ ಆಸಕ್ತಿಗೆ ನಿದರ್ಶನವಾಗಿದೆ.

☞ ಬಳಗದ ಸಕ್ರಿಯ ಸದಸ್ಯರು ಹಾಗೂ ಪ್ರಖ್ಯಾತ ಪುರೋಹಿತರಾದ ವಿದ್ವಾನ್ ಶ್ರೀ ವರದರಾಜ ತಂತ್ರಿಯವರ ತೀರ್ಥರೂಪರಾದ ಶ್ರೀ ವೆಂಕಟರಮಣ ತಂತ್ರಿಯವರ ಜನ್ಮ ಶತಮಾನೋತ್ಸವ ದಿ. 28.4.2018 ರಂದು ಬೆಳ್ಮಣ್‌ನ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಸಮೀಪದಲ್ಲಿರುವ ಶ್ರೀ ತಂತ್ರಿ ಯವರ ಸ್ವಗೃಹದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಶ್ರೀ ತಂತ್ರಿಯವರ ಮಾತೋಶ್ರೀಯವರಾದ ಶ್ರೀಮತಿ ಭಾಗೀರಥಿಯವರ ಜೊತೆಗೂಡಿ ನಡೆದಿರುವ ಈ ವಿಶೇಷ ಸಮಾರಂಭದ ಸಂದರ್ಭದಲ್ಲಿ ಶ್ರೀ ಪೇಜಾವರ ಮಠಾಧೀಶರಾದ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಆಗಮಿಸಿ, ಶುಭಾನುಗ್ರಹವನ್ನು ನೀಡಿರುತ್ತಾರೆ. ಈ ಸಂಬಂಧ ದಿ. 24.4.2018 ರಿಂದ 30.4.2018 ರವರೆಗೆ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಂಶುಪಾಲರಾದ ಡಾ. ಹೆಚ್. ಸತ್ಯನಾರಾಯಣ ಆಚಾರ್ಯರವರಿಂದ ಭಾಗವತ ಸಪ್ತಾಹವನ್ನು ಶ್ರೀ ತಂತ್ರಿಯವರ ಕುಟುಂಬದ ಸ್ವಗೃಹದಲ್ಲಿ ಏರ್ಪಡಿಸಲಾಗಿತ್ತು.

☞ ಬಳಗದಲ್ಲಿ ಚಿರಪರಿಚಿತ ಕಲಾವಿದ ದಂಪತಿಗಳಾದ ಶ್ರೀ ಟಿ.ಎಸ್. ನಾಗರಾಜ ಉಪಾಧ್ಯಾಯ ಮತ್ತು ಶ್ರೀಮತಿ ಲೀಲಾವತಿ ಉಪಾಧ್ಯಾಯರವರ ಮೊಮ್ಮಗ ಶ್ರೀ ಟಿ.ಎನ್. ಉದಯಕೃಷ್ಣ ಉಪಾಧ್ಯಾಯ ಮತ್ತು ಶ್ರೀಮತಿ ಅನೂರಾಧ ಉಪಾಧ್ಯಾಯ ದಂಪತಿಗಳ ಸುಪುತ್ರ ಚಿ. ಧ್ರುವ ಉಪಾಧ್ಯಾಯನ ಬ್ರಹ್ಮೋಪದೇಶ ಸಮಾರಂಭವು ದಿ. 2.5.2018 ರಂದು ಬೆಂಗಳೂರಿನ ಶ್ರೀ ಪುತ್ತಿಗೆ ಮಠ, ಗೋವರ್ಧನ ಕ್ಷೇತ್ರದಲ್ಲಿ ವಿಧ್ಯುಕ್ತವಾಗಿ ನೆರವೇರಿದೆ.

☞ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಟಿ.ಎಸ್. ನಾಗರಾಜ ಉಪಾಧ್ಯಾಯರವರ ಭೀಮರಥ ಶಾಂತಿಯು ದಿನಾಂಕ

7.5.2018 ರಂದು ವಾಮಂಜೂರು ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಸಂಭ್ರಮದಿಂದ ನೆರವೇರಿದೆ.

- ಬಳಗದ ಸದಸ್ಯರಾದ ಶ್ರೀ ವಿ. ಸತ್ಯನಾರಾಯಣ ಹೊಳ್ಳ ಮತ್ತು ಶ್ರೀಮತಿ ಅನುರಾಧ ದಂಪತಿಗಳ ಸುಪುತ್ರಿ ಸೌ.ಸಾಧನಾ ಎಸ್. ಹೊಳ್ಳ ಇವರ ವಿವಾಹ ಚಿ. ವೆಂಕಟೇಶ್ ಎಂಬ ವರನೊಂದಿಗೆ ದಿ. 13.5.2018 ರಂದು ಬೆಂಗಳೂರಿನ ಶ್ರೀ ಪ್ರಸನ್ನ ಕಲ್ಯಾಣ ಮಂದಿರದಲ್ಲಿ ವೈಭವದಿಂದ ನಡೆದಿದೆ.

- ಬಳಗದ ಸಕ್ರಿಯ ಸದಸ್ಯರಾದ ಶ್ರೀ. ಕೆ. ಪ್ರಕಾಶ ಭಟ್ ರವರು ಸಹೋದರರೊಂದಿಗೆ ತಮ್ಮ ಊರು ಬ್ರಹ್ಮಾವರದಲ್ಲಿ ಹೊಸದಾಗಿ ನಿರ್ಮಿಸಿರುವ ಮನೆ 'ಅಕ್ಷಯ'ದ ಪ್ರವೇಶ ಸಮಾರಂಭವು ದಿ.12.5.2018 ರಂದು ವಿಜೃಂಭಣೆಯಿಂದ ನೆರವೇರಿದೆ.

### ವಿವಾಹದ ಸ್ವರ್ಣ ಜಯಂತಿ

- ಭೃಗುವಾಣಿ ಸಂಚಿಕೆಯ ಓದುಗರಲ್ಲಿ ಪರಿಚಿತರಾದ ಪಡುಬಿದ್ರಿ ಲಕ್ಷ್ಮೀನಾರಾಯಣ ರಾವ್ ಮತ್ತು ಸಾವಿತ್ರಿಯವರ ವಿವಾಹದ 50ನೇಯ ವಾರ್ಷಿಕ ಸಮಾರಂಭ ದಿ.1.5.2018 ರಂದು ಬಸವನಗುಡಿಯ ಅನ್ನಪೂರ್ಣೇಶ್ವರಿ ಹಾಲಲ್ಲಿ ನಡೆಯಿತು. ಧಾರ್ಮಿಕ ವಿಧಿಗಳ ನಂತರ ಒಂದು ತಾಸಿನ ಚಿತ್ರ ಪ್ರದರ್ಶನ ಸಮೇತದ ಸಂವಾದ ಕಾರ್ಯಕ್ರಮ ಇದರ ಮುಖ್ಯ ವೈಶಿಷ್ಟ್ಯವಾಗಿತ್ತು.

  ಇಂದಿನ ಸಮಾಜದಲ್ಲಿನ ಸತ್ಯತೆಯ ಬಗ್ಗೆ ರಾವ್‌ರವರ ಕಳವಳ ಸೂಚಿಸುವ ಕಿರು ಕವಿತೆ ಏಕೆ ನೀ ಕಾಯುತಿಹೆ ಎಲೆ ಮಾನವಾ (ಭೃಗುವಾಣಿ ಅಕ್ಟೋಬರ್ 2017)ದ ಪ್ರತಿಯನ್ನು ಈ ಸಂದರ್ಭದಲ್ಲಿ ಎಲ್ಲರಿಗೂ ಹಂಚಲಾಯಿತು.

  ಮರುದಿನ ತಾ॥ 2.5.2018 ರಂದು ಜಯನಗರದ ರಾಜಲಕ್ಷ್ಮಿ ಕಲ್ಯಾಣ ಮಂದಿರದಲ್ಲಿ ಶ್ರೀ ಪಿ.ಎಲ್.ರಾವ್ ದಂಪತಿಗಳ ಮಗ ಪ್ರಸಾದ್‌ನ ಮಗ ಶಶಾಂಕ್‌ನ ಉಪನಯನ ಸಮಾರಂಭ ವಿಧಿವತ್ತಾಗಿ ನೆರವೇರಿತು.

- ಬಳಗದ ಸಕ್ರಿಯ ಸದಸ್ಯರಾದ ಶ್ರೀ ಪಿ.ವಿ. ದಿವಾಕರ್‌ರವರ ಷಷ್ಠಿಪೂರ್ತಿ ಸಮಾರಂಭದ ಅಂಗವಾಗಿ ದಿ.9.6.2018 ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಆತ್ಮೀಯ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು.

- ಬಳಗದ ಸಕ್ರಿಯ ಸದಸ್ಯರು ಹಾಗೂ ಇಷುದಿ ಮಾಸ ಪತ್ರಿಕೆಯ ನಿರ್ವಾಹಕ ಸಂಪಾದಕರಾಗಿರುವ ಶ್ರೀ ಡಿ. ಶರತ್‌ಕುಮಾರ್ ಭಟ್ ಮತ್ತು ಶ್ರೀಮತಿ ವೀಣಾ ಭಟ್ ದಂಪತಿಗಳ ಸುಪುತ್ರ ಚಿ. ಅಕ್ಷಯ ಕೃಷ್ಣ ನ ಬ್ರಹ್ಮೋಪದೇಶ ಸಮಾರಂಭವು ದಿ 21.6.2018ರಂದು ಬೆಂಗಳೂರಿನ ಶ್ರೀ ಪುತ್ತಿಗೆ ಮಠದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

- ಬಳಗದ ಸಕ್ರಿಯ ಸದಸ್ಯರಾದ ಶ್ರೀ ಅಡಿಗಳ್ ಮನೋಹರ್ ಭಟ್ ಮತ್ತು ಶ್ರೀಮತಿ ಶರಣ್ಯರವರ ಪುತ್ರ (ಶ್ರೀ ಅಡಿಗಳ್ ಶ್ರೀನಿವಾಸಭಟ್‌ರವರ ಮರಿ ಮೊಮ್ಮಗ ಹಾಗೂ ಶ್ರೀ ಅಡಿಗಳ್ ಅನಂತಕೃಷ್ಣ ಭಟ್ ಮತ್ತು ಶ್ರೀಮತಿ ಜಯಲಕ್ಷ್ಮಿಯವರ ಮೊಮ್ಮಗ) ಚಿ. ಅಪ್ರಮೇಯ ಎಂ. ಭಟ್‌ನ ಬ್ರಹ್ಮೋಪದೇಶ ದಿ.25.6.2018ರಂದು ಅಡಿಗರ ಸ್ವಗೃಹ ಪುತ್ತಿಗೆಯ ಅಂಗಣಿಮಾರ್‌ನಲ್ಲಿ ವಿಜೃಂಭಣೆಯಿಂದ ನೆರವೇರಿದೆ.

---

### ನಾಗರಿಕ ಸೇವಾ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಪಡೆದ ಕು. ಶ್ವೇತಾ



ಜನಪ್ರಿಯ ಹೋಟೆಲು ಉದ್ಯಮದಾರರು ಹಾಗೂ ಹಲವಾರು ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡಿರುವ ಶ್ರೀ ಜಿ. ಕೆ. ಸೋಮಯಾಜಿ ಮತ್ತು ಶ್ರೀಮತಿ ಗೀತಾ ಸೋಮಯಾಜಿ ದಂಪತಿಗಳ ಸುಪುತ್ರಿ ಕು. ಶ್ವೇತಾ. ಎಂ. ರವರು ಯು.ಪಿ.ಎಸ್.ಸಿಯ 2018ರ ಸಾಲಿನ ಪರೀಕ್ಷೆಯಲ್ಲಿ ದೇಶಕ್ಕೆ 119ನೇ ರ್‍ಯಾಂಕ್ ಹಾಗೂ ಕರ್ನಾಟಕದಲ್ಲಿ ಮೂರನೇ ರ್‍ಯಾಂಕ್‌ಗಳಿಸಿ ಶ್ಲಾಘನೀಯ ಸಾಧನೆಯನ್ನು ಮಾಡಿದ್ದಾರೆ. ಬಾಲ್ಯದಿಂದಲೂ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಪ್ರತಿಭೆಯನ್ನು ಮೆರೆಯುತ್ತಿದ್ದ ಕು. ಶ್ವೇತಾ ಬಿ.ಎಂ.ಎಸ್.ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿಯಲ್ಲಿ ಚಿನ್ನದ ಪದಕ ವಿಜೆತೆಯಾಗಿದ್ದಾರೆ. ಅಮೋಘ ಸಾಧನೆಗೆ ಕು. ಶ್ವೇತಾ ರವರಿಗೆ ಅಭಿನಂದನೆಗಳು ಹಾಗೂ ಅವರಿಂದ ದೇಶಕ್ಕೆ ಉತ್ತಮ ಸೇವೆ ಸಲ್ಲುವಂತಾಗಲಿ ಎಂದು ಹಾರೈಕೆ.

---



ಬಳಗದ ಪೋಷಕ ಸದಸ್ಯರಾದ ಡಾ. ಯು.ಸಬ್ರಮಣ್ಯ ಮತ್ತು ಶ್ರೀಮತಿ ಪ್ರಸನ್ನಾ ದೇವಿಯವರ ಪುತ್ರಿ ಡಾ. ಸೌರಭ ಯು.ಎಸ್.ರವರು ಎಂ.ಯು.ಹೆಚ್.ಎಸ್. ಯುನಿವರ್ಸಿಟಿ ನಡೆಸುವ ಕಮ್ಯುನಿಟಿ ಮೆಡಿಸಿನ್‌ನಲ್ಲಿ ಎಂ.ಡಿ. ಸ್ನಾತಕೋತ್ತರ ಪದವಿಯನ್ನು ಸುವರ್ಣ ಪದಕದೊಂದಿಗೆ ಪಡೆದಿರುತ್ತಾರೆ. ಈ ಪ್ರತಿಭಾವಂತ ವಿದ್ಯಾರ್ಥಿ ತನ್ನ ಎಂ.ಬಿ.ಬಿ.ಎಸ್ ಪದವಿಯನ್ನು ಬೆಂಗಳೂರು ಕಿಮ್ಸ್‌ನಿಂದ ಗಳಿಸಿರುತ್ತಾರೆ. ಡಾ. ಸೌರಭರವರಿಗೆ ಅಭಿನಂದನೆ ಮತ್ತು ಶುಭ ಹಾರೈಕೆಗಳು.

## ಭಾವಪೂರ್ಣ ಶ್ರದ್ಧಾಂಜಲಿ

ನಮ್ಮ ಸಮಾಜದ ಗಣ್ಯವ್ಯಕ್ತಿ, ಹಿರಿಯ ವಿದ್ವಾಂಸ ಹಾಗೂ ಕೊಡುಗೈ ದಾನಿ ಬೆಂಗಳೂರು ಗುಂಡೋಪಂತ್ ರಸ್ತೆಯ ಉಡುಪಿ ಸ್ಟೋರ್ಸ್‌ನ ಸ್ಥಾಪಕ ವಿದ್ವಾನ್ ಟಿ. ರಾಮಕೃಷ್ಣ ಕೇಕುಡರವರು ದಿ.29.5.2018 ರಂದು ದೈವಾಧೀನ ರಾಗಿದ್ದಾರೆ. ಈ ಸಂಬಂಧ ವೈಕುಂಠ ಸಮಾರಾಧನೆ ದಿ. 11.6.2018ರಂದು ಶೀ ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ನೆರವೇರಿದೆ. ಮೃತರಿಗೆ ಬಳಗದ ಶ್ರದ್ಧಾಂಜಲಿ.

---

ಬಳಗದ ಸದಸ್ಯರಾದ ಶ್ರೀ ತೋನ್ಸೆ ರಾಮಕೃಷ್ಣ ರಾವ್‌ರವರು ದಿ.20.5.2018 ರಂದು ದೈವಾಧೀನರಾಗಿರುತ್ತಾರೆ. ಮೃತರ ಆತ್ಮಕ್ಕೆ ಶ್ರದ್ಧಾಂಜಲಿ.

## ಮಹಿಳಾ ವಿಭಾಗದಿಂದ ಸಂಗೀತ ತರಗತಿ :

ಆನಂದ ಬಳಗದ ಮಹಿಳಾ ವಿಭಾಗದ ನೇತೃತ್ವದಲ್ಲಿ ಸಂಗೀತ ತರಗತಿಯು ಪ್ರತಿ ಶನಿವಾರ ಸಂಜೆ 3 ರಿಂದ 4.30ರವರೆಗೆ ಹೋಟೆಲ್ ಉಡ್‌ಲ್ಯಾಂಡ್ಸ್ ಆವರಣದಲ್ಲಿ ನಡೆಯಲಿದೆ. ಖ್ಯಾತ ಸಂಗೀತ ವಿದುಷಿ ವಿದ್ವಾನ್ ಗೀತಾ ವಸಂತ್‌ರವರ ಮಾರ್ಗದರ್ಶನದಲ್ಲಿ ನಡೆಯಲಿರುವ ಸಂಗೀತ ಕ್ಲಾಸ್‌ನಲ್ಲಿ ಆಸಕ್ತರು ಭಾಗವಹಿಸಿ, ಇದರ ಸದುಪಯೋಗ ಪಡೆಯುವಂತೆ ವಿನಂತಿಸಲಾಗಿದೆ.

## ಮಹಿಳಾ ವಿಭಾಗದ ನೇತೃತ್ವದಲ್ಲಿ ವಧು–ವರಾನ್ವೇಷಣೆ

ಆನಂದ ಬಳಗದ ಮಹಿಳಾ ವಿಭಾಗದವರು ಕಳೆದ ಕೆಲವಾರು ವರ್ಷಗಳಿಂದ ಬಳಗದ ಸದಸ್ಯರ ಅನುಕೂಲಕ್ಕಾಗಿ ವಧು–ವರಾನ್ವೇಷಣೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರ ಪ್ರಯೋಜನವನ್ನು ಈಗಾಗಲೇ ನೂರಾರು ಸದಸ್ಯರು ಪಡೆದುಕೊಂಡಿರುವುದು ಸಂತಸದ ವಿಚಾರ. ಈ ಕಾರ್ಯಕ್ರಮವು ಮುಖ್ಯವಾಗಿ ಬಳಗದ ಸದಸ್ಯರು ಮತ್ತು ಅವರ ಸಂಬಂಧಿಕರಿಗೆ ಮೀಸಲಾಗಿದ್ದು ಪ್ರತಿ ಬುಧವಾರ ಮತ್ತು ಶನಿವಾರ ಅಪರಾಹ್ನ ಗಂಟೆ 2.30 ರಿಂದ 4.30ರ ವರೆಗೆ ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ವುಡ್‌ಲ್ಯಾಂಡ್ಸ್‌ನ ಆವರಣದಲ್ಲಿ ನಡೆಸಲಾಗುತ್ತಿದೆ.

ಬಳಗದ ಸದಸ್ಯರು ನಿಗದಿತ ವೇಳೆಯಲ್ಲಿ ಆಗಮಿಸಿ ಈ ಯೋಜನೆಯ ಸದುಪಯೋಗವನ್ನು ಪಡೆಯುವುದರೊಂದಿಗೆ ನಮ್ಮೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಳಿಗಾಗಿ ದಯವಿಟ್ಟು ಈ ಕೆಳಗಿನವರನ್ನು ಸಂಪರ್ಕಿಸಬೇಕಾಗಿ ವಿನಂತಿಸುತ್ತೇವೆ

**ಶ್ರೀಮತಿ ಗೀತಾ ಪಿ.ಆರ್. ರಾವ್** 9945938411

**ಶ್ರೀಮತಿ ಸುಧಾ ಎಂ. ರಾವ್** 9901127738


Vineeti
Progress Simplified

# VINEETI TECHNOLOGIES

- Solar power in parallel with Grid power or DG set– ensuring full load taking capability, no changes needed
- Excess Solar power exported to Grid – no wastage
- Enjoy maintenance free source of power from Solar
- Modular design –can install in 2-3 phases as required
- Combined with energy storage ( battery) for spike load and emergency back up
- Build Own Operate & Transfer(BOOT) model, with no initial Investments, provided for eligible installations above 25kWp
- Fixed cost of power for 25 years unlike Grid power cost
- Eligible for Accelerated depreciation – offers payback of 4-5 years
- Financing from major banks are available

We provide complete end to end services for Roof Top Solar power of 5kW to 1000kW

- o Site survey, study of power needs of the company, space required for Roof top power plant
- o Installation & commissioning of Solar power plants and Maintenance support
- o Coordinate Government clearances, permissions and Facilitate Finance for the project
- o Build Own Operate & Transfer model with no investment for eligible customers

**Vineeti Technologies**

144, NGEF Layout, RMV II Stage, Sanjaynagar, Bangalore – 560094

Ph: 7795857955, 9901393400 email: info@vineeticonsultants.in

www.vineeticonsultants.in/vthome

# Start the day feeling .....



## .......Light & comfortable




***For sure relief from CONSTIPATION use...***

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (April - June 2018) Regd. with RNI under No.KARKAN/2012/45587 No. of Pages : 36 (32+4)




If undelivered please return to:
Ananda Balaga
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02